# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.318-2018** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ನಾಸೀರ್<br>ಚಾಮಲಾಪುರಹುಂಡಿ, ನಂಜನಗೂಡು ಟೌನ್ |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 24-01-2025. |

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಟಿ.ಆರ್ ವಕೀಲರಿಂದಃ**

4. ನಾನು ಈ ದಾವೆಯಲ್ಲಿ ಶೇಕ್ ಹುಸೇನ್ ರವರನ್ನು ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಶೇಕ್ ಹುಸೇನ್ ಸುಮಾರು ವರ್ಷಗಳ ಹಿಂದೆಯೇ ಮೃತಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾವಾ ಸಲ್ಲಿಸುವ ವೇಳೆಗೆ ಶೇಕ್ ಹುಸೇನ್ ರವರು ಮರಣ ಹೊಂದಿದ್ದರು ಎಂದರೆ ಸರಿ. ನಿಪಿ-6 ಮತ್ತು 7 ಅನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ, ನಗರ ಸಭೆಯವರು ಯಾರಿಗೆ ನೋಟಿಸ್ ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಕೆಲಸವನ್ನು ನಿಲ್ಲಿಸುವಂತೆ ನಗರಸಭೆಗೆ ನಾನು ನೀಡಿದ್ದ ಮನವಿಯ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

5. ನನ್ನ ಮನೆಯ ಉತ್ತರಕ್ಕೆ ಇರುವ ಹೈದರ್ ಸಾಬ್ ರವರಿಗೆ ಸೇರಿದ ಜಾಗವು ದೊಡ್ಡದಾಗಿರುತ್ತದೆ ಎಂದರೆ ಸರಿ. ನನ್ನ ತಾಯಿಯವರ ಹೆಸರು ಖೈರುನ್ನಿಸಾ ಆಗಿದ್ದು,

ಸಪುರಾಭೀ ಅಲ್ಲ ಎಂದರೆ ಸರಿ. ನಾನು ಈಗ ನನ್ನ ಜಾಗದಲ್ಲಿ ಕಟ್ಟಡವನ್ನು ಕಟ್ಟುತ್ತಿರುತ್ತೇನೆ. ನನಗೆ ಸೇರಿದ ನಿವೇಶನದಲ್ಲಿ ಸರ್ಕಾರದವರು ಮನೆಯನ್ನು ನಿರ್ಮಿಸಿಕೊಡುತ್ತಿದ್ದು, ಆದರೆ ಅದಕ್ಕೆ ಸಂಬಂಧಪಟ್ಟ ಯಾವುದೇ ದಾಖಲಾತಿಗಳು ನನ್ನ ಬಳಿ ಇರುವುದಿಲ್ಲ. ನಾನು ಹೇಳುವಂತೆ ನಮಗೆ ಸರ್ಕಾರದಿಂದ ಯಾವುದೇ ಮನೆಯನ್ನು ನಿರ್ಮಾಣ ಮಾಡಿಕೊಡಲು ಆದೇಶವಾಗದೇ ಇದ್ದರೂ ಸಹ ಆದೇಶ ವಾಗಿರುತ್ತದೆ ಎಂದು  ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಟ್ಟುತ್ತಿರುವ ಮನೆಗೆ ಕಟ್ಟಡ ಪರವಾನಗಿಯನ್ನು ಪಡೆದುಕೊಂಡಿರುವುದಿಲ್ಲ, ಸಾಕ್ಷಿ ಮುಂದುವರೆದು ಸರ್ಕಾರದವರೇ ಮನೆಯನ್ನು ನಿರ್ಮಾಣ ಮಾಡಿಕೊಡುತ್ತಿ ರುವುದರಿಂದ ಯಾವುದೇ ಕಟ್ಟಡ ಪರವಾನಗಿಯನ್ನು ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮನೆ ಕಟ್ಟಲು ಯಾವುದೇ ಕಟ್ಟಡ ಪರವಾನಗಿಯನ್ನು ಪಡೆಯದೇ ಅಕ್ರಮವಾಗಿ ಮನೆ ನಿರ್ಮಾಣ ಮಾಡುತ್ತಿರುವುದರಿಂದ ಸರ್ಕಾರದವರು ಮನೆಯನ್ನು ನಿರ್ಮಾಣ ಮಾಡಿಕೊಡುತ್ತಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನಾನು ಅಕ್ರಮವಾಗಿ ಕಟ್ಟುತ್ತಿರುವ ಮನೆಗೆ ಪ್ರತಿವಾದಿಗಳು ತೊಂದರೆ ನೀಡಬಾರದು ಎಂಬ ಉದ್ದೇಶದಿಂದ ಪ್ರತಿವಾದಿಗಳ ವಿರುದ್ಧ ಈ ಸುಳ್ಳು ದಾವಾವನ್ನು ಸಲ್ಲಿಸಿರುತ್ತೇನೆ  ಎಂದರೆ ಸರಿಯಲ್ಲ.   ನಾನು ಅಕ್ರಮವಾಗಿ ಮನೆ ಕಟ್ಟುತ್ತಿರುವುದರಿಂದ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಸ್ವತ್ತನ್ನು ಒತ್ತುವರಿ ಮಾಡಿಕೊಂಡು ನಾನು ಮನೆ ನಿರ್ಮಾಣ ಮಾಡುತ್ತಿರುವುದರಿಂದ ಪ್ರತಿವಾದಿಗಳು ನನಗೆ ತೊಂದರೆ

ಕೊಡಬಾರದು ಎಂಬ ಉದ್ದೇಶದಿಂದ ಈ ಸುಳ್ಳು ದಾವಾವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾಸವಿರುವ ಮತ್ತು ಮನೆಕಟ್ಟುತ್ತಿರುವ ಜಾಗವು ನನಗೆ ಸೇರಿದ ಇದ್ದರೂ ಸಹ ಹೇಗಾದರೂ ಮಾಡಿ ಸದರಿ ಜಾಗವನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವಾವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**